ಕಥೆ

# ಪೆಟಾರಿ



**ಡಾ. ಜಾಜಿ ದೇವೇಂದ್ರಪ್ಪ**

ಕಲೆ: ಮುರಳೀಧರ್ ರಾಥೋಡ್

ಯಳ್ಳಾರ್ತಿಯೆಂಬೋ ಊರೊಳಗ, ಓಬಳರಾಯನ ಕಟ್ಟೆಯ ಎಡಭಾಗಕ್ಕೆ ಹೊಂದಿಕೊಂಡಿರುವ ಆರು ಅಂಕಣದ ಮನೆ ಅಂದರೆ ಅದು ಬಸಮ್ಮವ್ವನ ಮನೆ. ಊರು ಹುಟ್ಟಿದಾಗಿನಿಂದ ಬಸಮ್ಮವ್ವನ ಮನೆಯಷ್ಟು ಅಂಕಣ, ಪಡಸಾಲಿ, ಎಂಟೆತ್ತಿನ ಒಕ್ಕಲುತನ, ಮನೆ ತುಂಬ ಕೈಗೊಂದು, ಕಾಲಿಗೊಂದು ಆಳುಕಾಳುಗಳು ಯಾರಿಗೂ ಇದ್ದಿಲ್ಲ. ಬಸಮ್ಮವ್ವನ ಮನೆತನ ಅಂದ್ರೆ ಬಂಗಾರದ ಗಟ್ಟಿಗಳನ್ನು ಹಗೇವುಗಳಲ್ಲಿ ತುಂಬಿದ್ವಂಶ ಅಂತ ಸುತ್ತಲಿನ ಊರಂಬ ಊರುಗಳು ಪುರಾಣದ ಕತೆಯಂತೆ ಬಾಯಿಂದ ಬಾಯಿಗೆ ಬೆಳೆಸಿತ್ತು. ಊರಿಗೆ ಯಾರೇ ಬರಲಿ ಬಸಮ್ಮವ್ವನ ಮನೆ ನೋಡಬೇಕು. ಮನೆಮುಂದೆ ಎರಡು ಬಿಲ್ವಪತ್ರೆ ಗಿಡಗಳು. ಸಾಕ್ಷಾತ್ ಶಿವನೆ ವಾಸಮಾಡುತ್ತಾನೆಂದು ಅವ್ವ ಬೆಳೆಸಿದ್ದಳು. ತುಸು ಮುಂದೆ ಹೋದರೆ ವರಾಂಡದಾಗ ಬಸಮ್ಮನಷ್ಟೇ ವಯಸ್ಸಾದ, ಬಾನಿಗೆ ಚಾಚಿದ ತೆಂಗಿನಗಿಡ. ಬೇಸಿಗೆ ದಿನಗಳಲ್ಲಿ ಊರಿನ ಜನ ತಣ್ಣಗ ಗಾಳಿಗೆ ಮೈಯೊಡ್ಡಿ ಅವರವರ ಮನೆ ಮಾಳಿಗೆಗಳ ಮೇಲೆ ಮಕ್ಕಳನ್ನು ಮಲಗಿಸಿಕೊಂಡು ನಿದ್ದೆಯೊಳಗೆ ತೇಲಾಡುತ್ತಿದ್ದರು. ಬೇಸಿಗೆ ದಿನಗಳಲ್ಲಿ ಒಮ್ಮೊಮ್ಮೆ ಅಪರೂಪಕ್ಕೆ ಬರುವ ಮಿಂಡಗಾರನಂತೆ ಎರೆಗುಡ್ಡದ ಕಡೆಯಿಂದ ರೆಮ್ ಅಂತ ತಂಗಾಳಿ ಬೀಸುತ್ತಿತ್ತು. ಮಗದೊಮ್ಮೆ ಸುಂಟರಗಾಳಿ. ಅದು ಬಸಮ್ಮವ್ವನ ಮನೆಮುಂದೆ ಇದ್ದ ತೆಂಗಿನ ಗಿಡದ ರೌದೆಗಳು ರ್ ರ್... ಅಂದಾಗ ಗಾಢನಿದ್ದೆಯೊಳಗೆ ತೇಲುತ್ತಿದ್ದ ಮಕ್ಕಳು “ದೆವ್ವ ಬಂತಂಗೇಯಮ್ಮ ನಾನು ಮಕ್ಕಂಬಕಲ್ಲ ಮ್ಯಾಳಿಗೆ ಮ್ಯಾಗ, ನಾನು ಮನ್ಯಾಕ ಓತುನಂಗೇ’ ಅಂತ ಹಟ ಹಿಡಿತಿದ್ದವು.

ಕಲ್ನಾಡಿನ ಮಹಾ ಬಂಡೆಗಳಿಂದ ಹೊರಹೊಮ್ಮುವ ಈ ಗಾಳಿಯ ರುದ್ರಾವತಾರಕ್ಕೆ ಬಸಮ್ಮವ್ವನ ತೆಂಗಿನಗಿಡ ಬಾನಿನಿಂದ ಬಾಗಿ ನೆಲಕ್ಕೆ ಬಡಿದು ಬರ್‌ಬರ್ ಅಂದದ್ದು ಓಣಿಯ ಜನರ ನಿದ್ದೆಗೆ ಭಂಗ ತಂದಿದ್ದೂ ಉಂಟು. ಇದೇ ಬೇಸಿಗೆಯಲ್ಲಿ ಊರೆಂಬ ಊರು ಮಾಳಿಗೆಯಲ್ಲಿ ಪರವಶವಾಗಿ ನಿದ್ದೆಯ ಕಡಲಲ್ಲಿದ್ದರೆ, ಈ ಪುಣ್ಯಭೂಮಿಯ ಮೇಲಿನ ಸುವರ್ಣಾವಕಾಶವನ್ನು ಬಳಸಿಕೊಂಡು ಯುವ ಪ್ರೇಮಿಗಳು, ಕಳ್ಳ ಪ್ರೇಮಿಗಳು, ಮಿಂಡಗಾರನನ್ನು ಒಲಿಸಿಕೊಂಡವಳು, ಇತ್ಯಾದಿ ಪ್ರಕಾರದ ಜನವು ಯಾರಿಲ್ಲದೂರಲ್ಲಿ ಮಿಂಡನಿಗೆ ನೂರಾರು ಮಂಚ ಎಂಬಂತೆ ಕತ್ತಲ ಗವಾರದ ಓಣಿಯ ಮರಿಯಾದ ಕಿರುಓಣಿಯ ನಿಗೂಢ ಕಟ್ಟೆಗಳ ಕೆಳಗೆ ಗವಿಯಂತಿರುವ ಗುಣೇವುಗಳಲ್ಲಿ ಶೂನ್ಯಸ್ಥಿತಿಯಲ್ಲಿ ಒಬ್ಬರ ಮೇಲೊಬ್ಬರು ಬಿದ್ದುಕೊಂಡು, ಪಿಸುಮಾತುಗಳನ್ನಾಡುತ್ತಾ ಇನ್ನೇನು ದೇಹ ದೇಹಗಳ ಏಳು ಜನ್ಮದ ಮೈತ್ರಿಯಿಂದ ಉತ್ಪಾದಿಸಿದ ಮಹಾಫಲ ಜೇನಿನಂತೆ ಸ್ಫೋಟಗೊಳ್ಳುತ್ತದೇನೋ ಅನ್ನುವಷ್ಟರಲ್ಲಿ ಯಾರೋ